ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಉಪಸ್ಥಿತರು:- ವೆಂಕನಗೌಡ ಆರ್ ಪಾಟೀಲ್

ತಹಶೀಲ್ದಾರರು ಹೂವಿನಹಡಗಲಿ.

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| 1)ಮಾದಿಗರ ದುರುಗವ್ವ ಗಂಡ ಲೇಟ್ ಮರಿಯಪ್ಪ<br>2)ಮಾದಿಗರ ದುರುಗವ್ವ ತಂದೆ ಲೇಟ್ ಹೊನ್ನಪ್ಪ<br>3)ಮಾದಿಗರ ಮೈಲಪ್ಪ ತಂದೆ ಲೇಟ್ ಹೊನ್ನಪ್ಪ<br>4)ಮಾದಿಗರ ನಿಂಗಪ್ಪ ತಂದೆ ಲೇಟ್ ಹೊನ್ನಪ್ಪ<br>5)ಮಾದಿಗರ ಹುಲಿಗೆವ್ವ ಗಂಡ ಲೇಟ್ ಚಿನ್ನಪ್ಪ<br>6)ಮಾದಿಗರ ಪಕ್ಕೀರಪ್ಪ ತಂದೆ ಲೇಟ್ ಹೊನ್ನಪ್ಪ<br>7)ಮಾದಿಗರ ದುರುಗವ್ವ | ಹೊನ್ನನಾಯ್ಕನಹಳ್ಳಿ ಅಂಜಿನಪ್ಪ ತಂದೆ ಲೇಟ್ ನಿಂಗಪ್ಪ,<br>ಕೊಯಿಲಾರಗಟ್ಟಿ<br><br>(ಹೆಚ್.ಬಸವರಾಜ ವಕೀಲರು, ಹೂವಿನಹಡಗಲಿ) |

<u>ದಾವಾ ಜಮೀನಿನ ವಿವರ</u>

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಕೊಯಿಲಾರಗಟ್ಟಿ | 73C/8 | 3.08 |

<u>ಪ್ರಸ್ತಾವನೆ:-</u>

ಮೇಲಿನ ದಾವಾ ಜಮೀನನ್ನು ಪೋತಿವಾರಸ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಗಳಾದ ಮಾದಿಗರ ದುರುಗವ್ವ ತಂದೆ ಲೇಟ್ ಹೊನ್ನಪ್ಪ ಇವರು ಅರ್ಜಿಸಲ್ಲಿಸಿದ್ದು, ಈ ಹಿನ್ನಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮ ಲೆಕ್ಕಾದಿಕಾರಿಗಳು ಹಡಗಲಿ ರವರು ನಮೂನೆ 21ನ್ನು ಜಾರಿಮಾಡಿದಾಗ ದಿನಾಂಕ 28/11/2014 ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೆಚ್ 20/2014-15 ದಿನಾಂಕ 19/11/2014 ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಹಾಗೂ ಪ್ರತಿವಾದಿಗಳಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 19/01/2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಗಿ ದಿನಾಂಕ 06/10/2016ರ ವರೆಗೆ ವಿಚಾರಣೆ ನಡೆಸಲಾಗಿದೆ.

ವಾದಿಗಳಾದ 1)ಮಾದಿಗರ ದುರುಗವ್ವ ಗಂಡ ಲೇಟ್ ಮರಿಯಪ್ಪ 2)ಮಾದಿಗರ ದುರುಗವ್ವ ತಂದೆ ಲೇಟ್ ಹೊನ್ನಪ್ಪ 3)ಮಾದಿಗರ ಮೈಲಪ್ಪ ತಂದೆ ಲೇಟ್ ಹೊನ್ನಪ್ಪ 4)ಮಾದಿಗರ ನಿಂಗಪ್ಪ ತಂದೆ ಲೇಟ್ ಹೊನ್ನಪ್ಪ 5)ಮಾದಿಗರ ಹುಲಿಗೆವ್ವ ಗಂಡ ಲೇಟ್ ಚಿನ್ನಪ್ಪ 6)ಮಾದಿಗರ ಪಕ್ಕೀರಪ್ಪ ತಂದೆ ಲೇಟ್ ಹೊನ್ನಪ್ಪ 7)ಮಾದಿಗರ ದುರುಗವ್ವ ಇವರು ಕೊಯಿಲಾರಗಟ್ಟಿ ಗ್ರಾಮದ ಸರ್ವೇ ನಂಬರ 73C/8 (ವಿ) 3.08 ಎಕರೆ ಜಮೀನನ್ನು ಪಟ್ಟಾದಾರರ ವಾರಸುದಾರರಾದ ತಮ್ಮಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ತಮ್ಮ ವಾದವನ್ನು ತಿಳಿಸಿರುತ್ತಾರೆ.

ಪ್ರತಿವಾದಿಗಳು ಹೊನ್ನನಾಯ್ಕನಹಳ್ಳಿ ಅಂಜಿನಪ್ಪ ತಂದೆ ಲೇಟ್ ನಿಂಗಪ್ಪ, ಕೊಯಿಲಾರಗಟ್ಟಿ ಅವರ ಈ ವಿವಾದಿತ ಜಮೀನಿನಲ್ಲಿ ವಾದಿಗಳ ಮನವಿಯನ್ನು ವಜಾಗೊಳಿಸಬೇಕು, ಈ ಜಮೀನಿನಲ್ಲಿ ಅವರ ಹಿಸ್ಸಾ ಇದ್ದು ಸದರಿ ಜಮೀನನ್ನು ತಮ್ಮಗಳ

ಹೆಸರಿಗೆ ಕ್ರಯಕರಾರು ಆಗಿದ್ದು, ಸದರಿ ಜಮೀನನ್ನು ತಾವುಗಳೆ ಸಾಗುವಳಿಮಾಡುತ್ತೀದ್ದು ನಮಗೂ ಸದರಿ ಜಮೀನಿನಲ್ಲಿ ಹಿಸ್ಸಾ ಇರುವುದಾಗಿ ತಿಳಿಸಿ ಪೋತಿ ವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿ ಲಿಖಿತ ತಕರಾರು ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿಗಳ/ಪ್ರತಿವಾದಿಗಳ ಹಾಗೂ ಪ್ರತಿವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು. ಪ್ರಕರಣದ ಈ ಕೆಳಕಂಡ ಆದೇಶ.

**ಸಂ/ಕಂ/ಪಹಣಿ/ವಿವಾದ/49/2014-15** **ದಿನಾಂಕ 20/10/2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ ಅನ್ವಯ ಪೋತಿವಾರಸ ಪ್ರಕಾರ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ್ದು, ವಾದಿ-ಪ್ರತಿವಾದಿಗಳು ಭಾಧಿತರಾದಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಿ ಕೊಳ್ಳಬಹುದೆಂದು ಸೂಚಿಸುತ್ತಾ ಪ್ರಕರಣವನ್ನು ವಿಲೇಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 20/10/2016 ಬಹಿರಂಗ ನ್ಯಾಯಲದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು;

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.